# KARNATAKA LOKAYUKTA

No.UPLOK-2/DE.445/2018/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 23.12.2021.

## RECOMMENDATION

Sub:- Departmental inquiry against (1) Smt.Gayathri, Village Accountant, (2) Sri P.Nataraj, Revenue Inspector, (3) Sri Muni Rangaswamaiah, Village Accountant and (4) Sri Girish, Revenue Inspector, Nelamangala Taluk Office, Bengaluru Rural District - reg.

Ref:- 1) Government Order No.RD 26 BDP 2017 dated 11.04.2017.

2) Nomination order No. UPLOK-2/DE.445/2018 dated 22.09.2018 of Upalokayukta, State of Karnataka.

3) Inquiry report dated 20.12.2021 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 11.04.2017 initiated the disciplinary proceedings against (1) Smt.Gayathri, Village Accountant, (2) Sri P.Nataraj, Revenue Inspector, (3) Sri Muni Rangaswamaiah, Village Accountant and (4) Sri Girish, Revenue Inspector, Nelamangala Taluk Office, Bengaluru Rural
~~~~~

District, [hereinafter referred to as Delinquent Government Officials, for short as 'DGOs 1 to 4' respectively] and entrusted the departmental inquiry to this Institution.

2. This Institution by Nomination Order No. UPLOK-2/DE.445/2018 dated 22.09.2018 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them.

3. The DGOs were tried for the charge of illegally effecting katha in the name of Ammayyamma W/o Henjarappa eventhough there was no court order to that effect and thereby committed misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO 2 Sri P.Nataraj, Revenue Inspector, Nelamangala Taluk, is ' proved'.

5. Further, the Inquiry Officer (Additional Registrar of Enquiries- 14) on proper appreciation of oral and documentary evidence has held that, the above charge against the DGO 1 Smt.Gayathri, DGO 3 Sri Muni Rangaswamaiah, and DGO 4 Sri Girish, is ' not proved'.

6. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Enquiry Officer and exonerate DGO 1 Smt.Gayathri, Village Accountant, DGO 3 Sri Muni Rangaswamaiah, Village Accountant and DGO 4 Sri Girish, Revenue Inspector, Nelamangala Taluk Office, Bengaluru Rural District, of the charges leveled against them.

7. As per the First Oral Statement furnished by the Inquiry Officer, DGO.2 Sri P.Nataraj, is due to retire from service on 31.07.2036.

8. Having regard to the nature of charge '*proved*' against the DGO-2 Sri P.Nataraj and considering the totality of circumstances, it is hereby recommended to the Government to

impose penalty of ' withholding two increments payable to DGO-2 Shri P.Nataraj, with cumulative effect'.

9. Action taken in the matter shall be intimated to this Authority.

Connected records are enclosed herewith.

23/12/21

**(JUSTICE B.S.PATIL)**
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-445/2018/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 20/12/2021.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರರಾದ (1) **ಶ್ರೀಮತಿ. ಗ್ರಾಯತ್ರಿ,** ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) **ಶ್ರೀ. ಪಿ ನಟರಾಜ್,** ಕಂದಾಯ ನಿರೀಕ್ಷಕರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (3) **ಶ್ರೀ. ಮುನಿ ರಂಗಸ್ವಾಮಯ್ಯ,** ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (4) **ಶ್ರೀ. ಗಿರೀಶ್,** ಕಂದಾಯ ನಿರೀಕ್ಷರು, ತಹಶೀಲ್ದಾರ್‌ರವರ ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಬಿಡಿ/1361/2015/ಸನಿಕಾಸ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 19/01/2017.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 26 ಬಿಡಿಪಿ 2017, ಬೆಂಗಳೂರು, ದಿನಾಂಕ: 11/04/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/445/2018, ಬೆಂಗಳೂರು ದಿನಾಂಕ: 22/09/2018.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಎಂ.ವಿ ಬಸವರಾಜು,** ರೈಲ್ವೆ ಗೊಲ್ಲಹಳ್ಳಿ ಗೇಟ್ ಹತ್ತಿರ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರಾದ (1) **ಶ್ರೀಮತಿ. ಗ್ರಾಯತ್ರಿ,** ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) **ಶ್ರೀ. ಪಿ ನಟರಾಜ್,** ಕಂದಾಯ ನಿರೀಕ್ಷಕರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (3) **ಶ್ರೀ. ಮುನಿ ರಂಗಸ್ವಾಮಯ್ಯ,** ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (4) **ಶ್ರೀ. ಗಿರೀಶ್,** ಕಂದಾಯ ನಿರೀಕ್ಷರು, ತಹಶೀಲ್ದಾರ್‌ರವರ ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ಸಲ್ಲಿಸಿದ್ದು, ದೂರುದಾರರು ತಮ್ಮ ಮಾವ ಶ್ರೀ. ಮಾರ್ಕಂಡೇಯಸ್ವಾಮಿ ಇವರು ನೆಲಮಂಗಲ ತಾಲ್ಲೂಕು, ಕೊಡಗೆಹಳ್ಳಿ ಗ್ರಾಮದ ಸರ್ವೆ ನಂ.87ರಲ್ಲಿ 1 ಎಕರೆ 9 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ಈ ಜಮೀನಿಗೆ ಸಂಬಂಧಿಸಿದಂತೆ ಓ.ಎಸ್ ನಂ.1164/2000 ರಲ್ಲಿ ನ್ಯಾಯಾಲಯದ ಡಿಕ್ರಿಯನ್ನು ಸರಿಯಾಗಿ ಪರಿಶೀಲಿಸದೇ ಅಥವಾ ತಿಳಿದು ತಿಳಿದು ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಆದೇಶವಿಲ್ಲದಿದ್ದರೂ ಶ್ರೀಮತಿ. ಅಮ್ಮಯಮ್ಮ ಕೋಂ ಹೆಂಜರಪ್ಪ ಎಂಬುವವರ ಹೆಸರಿಗೆ ಖಾತೆ ಬದಲಾವಣೆ ಮಾಡಿ 1ನೇ ಎದುರುದಾರರು ಹಾಗೂ 2ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುತ್ತಾರೆ ಹಾಗೂ ಮುಂದುವರೆದು ಶ್ರೀ. ಮಾರ್ಕಂಡೇಯಸ್ವಾಮಿ ಇವರು ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣ ಸಂಖ್ಯೆ: ಆರ್‌ಎ 433/2012 ರ ತೀರ್ಪಿನಂತೆ ಖಾತೆ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, 3 ಮತ್ತು 4ನೇ ಎದುರುದಾರರು ಖಾತೆ ಬದಲಾವಣೆ ಮಾಡದೇ ಅನಾವಶ್ಯಕ ವಿಳಂಭ ಮಾಡಿ ಖಾತೆ ಬದಲಾವಣೆ ಆಗದಂತೆ ನೋಡಿಕೊಂಡಿರುತ್ತಾರೆ ಅಂತಾ ದೂರು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 11/04/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ

ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 22/09/2018 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌಕರರಾದ (1) ಶ್ರೀಮತಿ. ಗ್ರಾಯತ್ರಿ, ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) ಶ್ರೀ. ಪಿ ನಟರಾಜ್, ಕಂದಾಯ ನಿರೀಕ್ಷಕರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (3) ಶ್ರೀ. ಮುನಿ ರಂಗಸ್ವಾಮಯ್ಯ, ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (4) ಶ್ರೀ. ಗಿರೀಶ್, ಕಂದಾಯ ನಿರೀಕ್ಷರು, ತಹಶೀಲ್ದಾರ್‌ರವರ ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 19/02/2019 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

ಅ. ನೆಲಮಂಗಲ ತಾಲ್ಲೂಕು, ಕೊಡಿಗೆ ಹಳ್ಳಿ ಗ್ರಾಮದ ಸರ್ವೆ ನಂ.87 ಕ್ಷೇತ್ರ 1.09 ಗುಂಟೆ ಜಮೀನು ದೂರುದಾರರ ಮಾವ ಮಾರ್ಕಂಡೇಯ ಸ್ವಾಮಿಯವರದಾಗಿದ್ದು, ಅದನ್ನು ಅವರು ಕ್ರಯಪತ್ರದ ಮೂಲಕ ನರಸಯ್ಯ ರವರಿಂದ 1969ರಲ್ಲಿ ಖರೀದಿಸಿರುತ್ತಾರೆ. ನಂತರ ಹೆಂಜರಪ್ಪ ಎನ್ನುವವರು ತಾನು ನರಸಯ್ಯನ ಮಗನಾಗಿದ್ದು, ತನ್ನ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಈ ವಿಷಯ ಗಮನಕ್ಕೆ ಬಂದ ತಕ್ಷಣ

ಮಾರ್ಕಂಡೇಯಸ್ವಾಮಿಯವರು ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಅವರ ಮುಂದೆ ಆರ್.ಎ.ನಂ: 129/2006-07ನ್ನು ಸಲ್ಲಿಸಿದ್ದು, ಉಭಯ ಪಕ್ಷಗಾರರನ್ನು ವಿಚಾರಿಸಿ, ಎಂ ಆರ್ ನಂ.13/2004-05ನ್ನು ವಜಾ ಮಾಡಿ ಕ್ರಯ ಪತ್ರದಂತೆ ಖಾತೆ ಮಾಡಲು ಆದೇಶಿಸಿರುತ್ತಾರೆ. ಆದೇಶದ ಪ್ರಕಾರ ಮಾರ್ಕಂಡೇಯಸ್ವಾಮಿ ಹೆಸರಿನ್ಲಿ ಖಾತೆ ಬದಲಾವಣೆ ಆಗಿರುತ್ತದೆ. ಈ ಅವಧಿಯಲ್ಲಿ ಹೆಂಜರಪ್ಪನ ಹೆಂಡತಿ ಮತ್ತು ಮಕ್ಕಳು ಒ.ಎಸ್.1164/2009 ಅಂತ ಇದೇ ಮೇಲ್ಕಾಣಿಸಿದ ಜಮೀನಿನಲ್ಲಿ ವ್ಯತಿರಿಕ್ತ ಕಬ್ಜೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಗಾಗಿ ದಾವೆ ದಾಖಲಿಸಿದ್ದು, ಅದರಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಾತ್ರ ನೀಡಿ ನ್ಯಾಯಾಲಯ ಭಾಗಷ: ಡಿಕ್ರಿ ಮಾಡಿರುತ್ತದೆ. ಈ ಡಿಕ್ರಿ ಆದೇಶದ ಮೇಲೆ ಖಾತೆ ಬದಲಾವಣೆ ಮಾಡಲು ಎದುರುದಾರರಾದ (1) ಶ್ರೀಮತಿ ಗಾಯತ್ರಿ, ಗ್ರಾಮ ಲೆಕ್ಕಿಗರು, (2) ಶ್ರೀ ಪಿ.ನಟರಾಜ್, ಕಂದಾಯ ನಿರೀಕ್ಷಕಕರು, ನಿಮ್ಮಗಳ ಮುಂದೆ ಅರ್ಜಿ ಸಲ್ಲಿಸಿದಾಗ ನ್ಯಾಯಾಲಯದ ಡಿಕ್ರಿಯನ್ನು ಸರಿಯಾಗಿ ಪರಿಶೀಲಿಸದೇ ಅಥವಾ ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಆದೇಶ ಇಲ್ಲದಿದ್ದರೂ ಸಹ ಹೆಂಜರಪ್ಪ ರವರ ಹೆಂಡತಿ ಅಮ್ಮಯ್ಯಮ್ಮ ರವರಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿ ಎದುರುದಾರರಾದ 1 ಮತ್ತು 2 ರವರು ಕರ್ತವ್ಯಲೋಪ ಎಸಗಿರುತ್ತೀರಿ.

ಆ. ದೂರುದಾರರ ಮಾವ ಮಾರ್ಕಂಡೇಯಸ್ವಾಮಿ ಒ.ಎಸ್.ನಂ.1164/2009ರ ಡಿಕ್ರಿಯನ್ನು ಪ್ರಶ್ನಿಸಿ ಆರ್ ಎ ನಂ. ಆರ್.ಎ.433/2012ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಅದರಲ್ಲಿ ಒ.ಎಸ್.ನಂ.1164/2009ರ ಡಿಕ್ರಿಯನ್ನು ರದ್ದುಗೊಳಿಸಿ, ನ್ಯಾಯಾಲಯ ಆದೇಶ ನೀಡಿರುತ್ತದೆ. ಈ ಡಿಕ್ರಿಯ ಪ್ರಕಾರ ಖಾತೆ ಬದಲಾವಣೆ ಮಾಡಲು 3ನೇ ಎದುರುದಾರರರಾದ ಮುನಿರಂಗಸ್ವಾಮಯ್ಯ, ಗ್ರಾಮ ಲೆಕ್ಕಿಗರು ಮತ್ತು 4ನೇ ಎದುರುದಾರರಾದ

ಗಿರೀಶ್, ಕಂದಾಯ ನಿರೀಕ್ಷಕರು, ತಾಲ್ಲೂಕು ಕಚೇರಿ, ನೆಲಮಂಗಲ ತಾಲ್ಲೂಕು ರವರ ಮುಂದೆ ಅರ್ಜಿ ಸಲ್ಲಿಸಿದಾಗ, ಅವರು ನಮೂನೆ 21ನ್ನು ಪ್ರಚುರ ಪಡಿಸಿದಾಗ ಅದಕ್ಕೆ ತಕರಾರು ಸಲ್ಲಿಸಿರುತ್ತಾರೆ. ಈ ಒಂದು ಕಾರಣದಿಂದ ಅದನ್ನು ವಿವಾದಾತ್ಮಕ ಪ್ರಕರಣ ಎಂದು ದಾಖಲಿಸಿ ದೂರರುದಾರರ ಮಾವ ನ್ಯಾಯಾಲಯದ ಡಿಕ್ರಿ ಪಡೆದುಕೊಂಡು ಬಂದರೂ ಸಹ 3 ಮತ್ತು 4ನೇ ಎದುರುದಾರರಾದ ನೀವು ಖಾತೆ ಬದಲಾವಣೆ ಮಾಡದೇ ಅನಾವಶ್ಯಕ ವಿಳಂಬ ಮಾಡಿ ಖಾತೆ ಬದಲಾವಣೆ ಆಗದಂತೆ ನೋಡಿಕೊಂಡು, 1ರಿಂದ 4ನೇ ಎದುರುದಾರರಾದ ನೀವುಗಳು ಕರ್ತವ್ಯ ಲೋಪ ಎಸಗಿರುತ್ತೀರಿ.

3. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

(ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಅಡಿಯಲ್ಲಿ ಸಲ್ಲಿಸಿದ ವರದಿಯ ಯಥಾವತ್ತು ವಿವರಣೆಯಾಗಿರುತ್ತದೆ)

4. ದೂರುದಾರರಾದ ಶ್ರೀ. ಎಂ.ವಿ ಬಸವರಾಜು, ರೈಲ್ವೆ ಗೊಲ್ಲಹಳ್ಳಿ ಗೇಟ್ ಹತ್ತಿರ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ರವರು ಆಪಾದಿತ ಸರ್ಕಾರಿ ನೌಕರರಾದ (1) **ಶ್ರೀಮತಿ. ಗ್ರಾಯತ್ರಿ,** ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) **ಶ್ರೀ. ಪಿ ನಟರಾಜ್,** ಕಂದಾಯ ನಿರೀಕ್ಷಕರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (3) **ಶ್ರೀ. ಮುನಿ ರಂಗಸ್ವಾಮಯ್ಯ,** ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (4) **ಶ್ರೀ. ಗಿರೀಶ್,** ಕಂದಾಯ ನಿರೀಕ್ಷರು, ತಹಶೀಲ್ದಾರ್‌ರವರ ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ನೆಲಮಂಗಲ ತಾಲ್ಲೂಕು, ಕೊಡಿಗೆ ಹಳ್ಳಿ ಗ್ರಾಮದ ಸರ್ವೆ ನಂ.87 ಕ್ಷೇತ್ರ 1.09 ಗುಂಟೆ ಜಮೀನು ದೂರುದಾರರ ಮಾವ ಮಾರ್ಕಂಡೇಯ ಸ್ವಾಮಿಯವರದಾಗಿದ್ದು, ಈ ಜಮೀನನ್ನು ಇವರು ದಿ.10.7.1961ರಂದು ನೋಂದಣಿ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ. ಆನಂತರ ಒಬ್ಬ ಹೆಂಜರಪ್ಪ ಎನ್ನುವವರು ತಾನು ನರಸಯ್ಯನ ಮಗನಾಗಿದ್ದು, ತನ್ನ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡುವಂತೆ ಅರ್ಜಿ ಸಲ್ಲಿಸಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ. ಈ ವಿಷಯ ತಿಳಿದು ಮಾರ್ಕಂಡೇಯಸ್ವಾಮಿಯವರು ಮಾನ್ಯ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಅವರಲ್ಲಿ ಮೇಲ್ಮನವಿ ಸಲ್ಲಿಸಿ ಅದರಲ್ಲಿ ಹೆಂಜರಪ್ಪ ಅವರ ಹೆಸರಿನಲ್ಲಿರುವ ಖಾತೆಯನ್ನು ರದ್ದುಗೊಳಿಸಿ ಮಾರ್ಕಂಡೇಯಸ್ವಾಮಿ ಅವರ ಹೆಸರನ್ನು ದಾಖಲಿಸಲು ದಿ.16.10.2009ರಂದು ಆದೇಶಮಾಡಿರುತ್ತಾರೆ. ಈ ಅವಧಿಯಲ್ಲಿ ಹೆಂಜರಪ್ಪನ ಹೆಂಡತಿ ಮತ್ತು ಮಕ್ಕಳು ಒ.ಎಸ್.1164/2009 ಅಂತ ಇದೇ ಮೇಲ್ಕಾಣಿಸಿದ ಜಮೀನಿನಲ್ಲಿ ವ್ಯತಿರಿಕ್ತ ಕಬ್ಜೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಗಾಗಿ ದಾವೆ ದಾಖಲಿಸಿದ್ದು, ಅದರಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಾತ್ರ ನ್ಯಾಯಾಲಯ ನೀಡಿ ಭಾಗಷ: ಡಿಕ್ರಿ ಮಾಡಿತು.

ಮಾರ್ಕಂಡೇಯ ಸ್ವಾಮಿಯು ಈ ಡಿಕ್ರಿಯ ಮೇಲೆ ಆರ್.ಎ.ನಂ.433/2012 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅದರಲ್ಲಿ ಕೆಳನ್ಯಾಯಾಲಯದ ಡಿಕ್ರಿಯನ್ನು ರದ್ದುಗೊಳಿಸಲಾಗಿದೆ.

ಹೆಂಜರಪ್ಪ ಅವರ ಹೆಂಡತಿ ಮತ್ತು ಮಕ್ಕಳು ಒ.ಎಸ್.ನಂ.1164/2009ರಲ್ಲಿ ಪಡೆದುಕೊಂಡ ಭಾಗಶ: ಡಿಕ್ರಿಯ ಆಧಾರದ ಮೇಲೆ ಎದುರುದಾರರು ಮಾರ್ಕಂಡೇಯಸ್ವಾಮಿಯ ಹೆಸರಿನಲ್ಲಿರುವ ಖಾತೆಯನ್ನು ಅಮ್ಮಯ್ಯಮ್ಮ ಅವರ ಹೆಸರಿನಲ್ಲಿ ಬದಲಾವಣೆ ಮಾಡಿರುತ್ತಾರೆ. ಆದರೆ ನ್ಯಾಯಾಲಯದಲ್ಲಿ ಖಾತೆ ಬದಲಾವಣೆ ಮಾಡಲು ಯಾವುದೇ ಆದೇಶವಾಗಿರಲಿಲ್ಲ. ಮಾರ್ಕಂಡೇಯಸ್ವಾಮಿ ಅವರು ಆರ್.ಎ.433/2012ರಮ ತೀರ್ಪನ್ನು ಎದುರುದಾರರಾದ 3 ಮತ್ತು 4 ರವರಿಗೆ ಸಲ್ಲಿಸಿ ಖಾತೆ ಬದಲಾವಣೆ ಮಾಡಲು ಕೋರಿದ್ದರೂ ಎದುರುದಾರರು ಯಾವುದೇ ಕ್ರಮಕೈಗೊಳ್ಳದೇ ಕರ್ತವ್ಯಲೋಪವೆಸಗಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಂಡು ತನಗೆ ನ್ಯಾಯ ದೊರಕಿಸಿಕೊಡಬೇಕೆಂದೂ ದೂರು ಸಲ್ಲಿಸಿದ್ದಾರೆ.

6. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒ.ಎಸ್.1164/2010ರ ಡಿಕ್ರಿಯ ಮೇರೆಗೆ ಗಣಕಶಾಖೆಯಿಂದ ಬಂದ ಟಿ.ಆರ್.ನಂ.29/2012–13 ಎಂ.ಆರ್.10/2012–13 ರಂತೆ ಗ್ರಾಮದಲ್ಲಿ ನಮೂನೆ.21ನ್ನು ಪ್ರಚುರಪಡಿಸಿ ನಿಗಧಿತ ಅವಧಿ 30 ದಿನಗಳೊಳಗೆ ಯಾವುದೇ ತಕರಾರು ಬರದ ಕಾರಣ ಅನುಭವದ ಮೇರೆಗೆ ಕಡತ ತಯಾರಿಸಿ ಖಾತೆ ಬದಲಾವಣೆ ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7. 3 ಮತ್ತು 4ನೇ ಎದುರುದಾರರಾದ ತಮ್ಮ ಆಕ್ಷೇಪಣೆಯಲ್ಲಿ ಮಾರ್ಕಂಡೇಯಸ್ವಾಮಿ ಅವರು ನ್ಯಾಯಾಲಯದ ಆದೇಶದ ಪ್ರಕಾರ ತನ್ನ ಹೆಸರಿನಲ್ಲಿ ಖಾತೆ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದು, ಅದನ್ನು ಪುರಸ್ಕರಿಸಿ ಗಣಕಶಾಖೆಯಲ್ಲಿ ಚೆಕ್

ಲಿಸ್ಟ್ ಹೊರಡಿಸಬೇಕೆಂದು ಗ್ರಾಮಲೆಕ್ಕಿಗರ ವರದಿಯೊಂದಿಗೆ ಕಡತವನ್ನು ಕಛೇರಿಗೆ ನೀಡಲಾಗಿರುತ್ತದೆ. ಆದರೆ ನಮೂನೆ 21ನ್ನು ಜಾರಿಮಾಡಿದಾಗ ಹೆಚ್. ಶ್ರೀನಿವಾಸ್ ತಂದೆ ಹೆಂಜರಪ್ಪ ಅವರು ತಕರಾರು ಸಲ್ಲಿಸಿದ ಕಾರಣ ಅದನ್ನು ತಕರಾರು ಪ್ರಕರಣವೆಂದು ಎನ್.ಕೆ.ಟಿ./ಆರ್.ಆರ್.ಟಿ. ಸಿ.ಆರ್.ನಂ.31/2014–15 ಅಂತ ದಾಖಲಿಸಿ, ಪ್ರಕರಣ ವಿಚಾರಣೆ ಹಂತದಲ್ಲಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

8. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

9. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಸರ್ವೆ ನಂ.87 ಮೂಲತ: ದೂರುದಾರರ ಮಾವ ಮಾರ್ಕಂಡೇಯಸ್ವಾಮಿ ಕ್ರಯಪತ್ರದ ಮೂಲಕ ನರಸಯ್ಯ ಅವರಿಂದ 1969ರಲ್ಲಿ ಖರೀದಿಸಿದ ಬಗ್ಗೆ ದಾಖಲೆ ಲಭ್ಯವಿರುತ್ತದೆ. ಆನಂತರ ಹೆಂಜರಪ್ಪ ಅವರು ತಾನು ನರಸಯ್ಯನ ಮಗನೆಂದು ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ. ಇದು ಗಮನಕ್ಕೆ ಬಂದ ತಕ್ಷಣ ಮಾರ್ಕಂಡೇಯ ಸ್ವಾಮಿ ಮಾನ್ಯ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಅವರ ಮುಂದೆ ಆರ್.ಎ.129/06–07 ಅಂತ ಮೇಲ್ಮನವಿ ಸಲ್ಲಿಸಿದ್ದು, ಅದರಲ್ಲಿ ಉಭಯಪಕ್ಷಕಾರರನ್ನು ವಿಚಾರಿಸಿ, ಎಂ.ಆರ್.13/04–05ನ್ನು ವಜಾಕರಿಸಿ ಕ್ರಯಪತ್ರದಂತೆ ಖಾತೆ ಮಾಡಲು ಆದೇಶಿಸಿರುತ್ತಾರೆ. ಆ ಪ್ರಕಾರ ಮಾರ್ಕಂಡೇಯ ಅವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುತ್ತದೆ.

10. ಈ ಅವಧಿಯಲ್ಲಿ ಹೆಂಜರಪ್ಪ ಅವರ ಹೆಂಡತಿ ಮತ್ತು ಮಕ್ಕಳು ಒ.ಎಸ್.1164/2009 ಅಂತ ವ್ಯತಿರಿಕ್ತ ಕಬ್ಜೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ದಾವೆ ದಾಖಲಿಸಿದ್ದು, ಅದರಲ್ಲಿ ಶಾಶ್ವತ ನಿರ್ಬಂಧಕಾಜ್ಞೆ ಮಾತ್ರ ನೀಡಿ ನ್ಯಾಯಾಲಯ ಭಾಗಷ: ಡಿಕ್ರಿ ಮಾಡಿರುತ್ತದೆ. ಈ ಡಿಕ್ರಿಯ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಲು ಎದುರುದಾರರಾದ 1 ಮತ್ತು 2 ಅವರಿಗೆ ಅರ್ಜಿ ಸಲ್ಲಿಸಿದಾಗ ಅವರು ನ್ಯಾಯಾಲಯದ ಡಿಕ್ರಿಯನ್ನು ಸರಿಯಾಗಿ ಪರಿಶೀಲಿಸದೆ ಅಥವಾ ತಿಳಿದೂತಿಳಿದು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಆದೇಶವಿಲ್ಲದಿದ್ದರೂ ಹೆಂಜರಪ್ಪ ಅವರ ಹೆಂಡತಿ ಅಮ್ಮಯ್ಯಮ್ಮ ಅವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿರುತ್ತಾರೆ. ಆದ್ದರಿಂದ ಇದು, ಎದುರುದಾರರಾದ 1 ಮತ್ತು 2 ರವರ ಕರ್ತವ್ಯಲೋಪವೆಂದು ಕಂಡುಬರುತ್ತದೆ.

11. ದೂರುದಾರರ ಮಾವ ಮಾರ್ಕಂಡೇಯ ಸ್ವಾಮಿ ಒ.ಎಸ್.1164/2009ರ ಡಿಕ್ರಿಯನ್ನು ಪ್ರಶ್ನಿಸಿ ಆರ್.ಎ.433/2012 ರಲ್ಲಿ ಮೇಲ್ಮನವಿಯನ್ನು ದಾಖಲಿಸಿದ್ದು, ಅದರಲ್ಲಿ ಒ.ಎಸ್.1164/2009ರ ಡಿಕ್ರಿಯನ್ನು ರದ್ದುಗೊಳಿಸಿ ಆದೇಶನೀಡಿರುತ್ತದೆ. ಇವರು ಈ ಡಿಕ್ರಿಯ ಪ್ರಕಾರ ಖಾತೆ ಬದಲಾವಣೆ ಮಾಡಲು ಎದುರುದಾರರಾದ 3 ಮತ್ತು 4 ರವರಿಗೆ ಅರ್ಜಿ ಸಲ್ಲಿಸಿದಾಗ ಅವರು ನಮೂನೆ 21ನ್ನು ಪ್ರಚುರಪಡಿಸಿದಾಗ ಅದಕ್ಕೆ ತಕರಾರು ಸಲ್ಲಿಸಿರುತ್ತಾರೆ. ಆ ಒಂದು ಕಾರಣದಿಂದ ಅದನ್ನು ವಿವಾದಾತ್ಮಕ ಪ್ರಕರಣವೆಂದು ದಾಖಲಿಸಿ ವಿಚಾರಣೆ ಹಂತದಲ್ಲಿ ಇರುತ್ತದೆಂದು ತಿಳಿಸಿದ್ದಾರೆ. ದೂರುದಾರರ ಮಾವ ಮಾರ್ಕಂಡೇಯ ಸ್ವಾಮಿ ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಂಡು ಬಂದರೂ ಸಹಾ ಎದುರುದಾರರಾದ 3 ಮತ್ತು 4ರವರು ಖಾತೆ ಬದಲಾವಣೆ ಮಾಡದೆ ಅನವಶ್ಯಕ ವಿಳಂಬ ಮಾಡಿ ಖಾತೆ ಬದಲಾವಣೆ ಆಗದಂತೆ ನೋಡಿಕೊಂಡಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ 1 ರಿಂದ 4ನೇ ಎದುರುದಾರರು ಕರ್ತವ್ಯಲೋಪವೆಸಗಿರುತ್ತಾರೆಂಬ ಅಂಶ ಮೇಲ್ನೋಟಕ್ಕೆ ಕಂಡುಬರುತ್ತದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು 1 ರಿಂದ 4ನೇ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 4ನೇ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 4ನೇ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

14. 1 ರಿಂದ 4ನೇ ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1 ರಿಂದ 4ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಅಡಿಯಲ್ಲಿ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರ ವಿರುದ್ಧ

ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರುಗಳಿಗೆ ದಿನಾಂಕ: 23/10/2017 ರಂದು ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌ–1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ತಾನು ಗ್ರಾಮ ಲೆಕ್ಕಿಗನಾಗಿ ಕೆಲಸ ಮಾಡುತ್ತಿದ್ದಾಗ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ಉಪ ವಿಭಾಗ ಪ್ರಕರಣ ಸಂಖ್ಯೆ: ಆರ್.ಎ (ನೆ) 129/2006–07ರ ಆದೇಶ ದಿನಾಂಕ: 16/10/2009 ರಂತೆ ಎಂ.ಆರ್ 46/2010–11 ರಂತೆ ಇ.ಆರ್ ನಂ.49/2010–11 ರಂತೆ ಗಣಕ ಶಾಖೆಯಲ್ಲಿ ಚೆಕ್ ಲಿಸ್ಟ್ ಆಗಿಬಂದಂತೆ ಹೆಂಜಾರಪ್ಪ ಬಿನ್ ನರಸಯ್ಯ ಉರ್ಫ್ ಮುರಾರಯ್ಯ ರವರಿಂದ ಶ್ರೀ. ಎಸ್. ಮಾರ್ಕಂಡೇಯಸ್ವಾಮಿ ರವರು ಎಂ.ಆರ್ ನಂ.46/2010–11 ದಿನಾಂಕ: 27/03/2011ರ ನಂತರ ರಾಜಸ್ವ ನಿರೀಕ್ಷಕರಿಂದ ಆದೇಶ ಪಡೆದು ಖಾತೆ ಮಾಡಿದ ನಂತರ ಮ್ಯುಟೇಷನ್ ಅಂಗೀಕರಿಸಲಾಗಿತ್ತು. ನಂತರ ಜೆ.ಎಂ.ಎಫ್.ಸಿ ನ್ಯಾಯಾಲಯ ಆದೇಶದ ಸಂಖ್ಯೆ: ಓ.ಎಸ್.

ನಂ.1164/2009-10 ಹಳೆ ಓ.ಎಸ್ ನಂ.580/2008 ರ ಡಿಕ್ರಿ ಆದೇಶದಂತೆ ವಿಭಾಗ ಪತ್ರದ ಮೇರೆಗೆ ಗಣಕ ಶಾಖೆಯಿಂದ ಬಂದ ಪಿ.ಆರ್ ನಂ.29/2012-13, ಎಂ.ಆರ್ ನಂ.10/2012-13 ರಂತೆ ಗ್ರಾಮ ನಮೂನೆ 21 ರನ್ನು ಪ್ರಚೂರ ಪಡಿಸಿರುತ್ತೇವೆ. ಮುಂದುವರೆದು, ನಿಗಧಿತ ಅವಧಿ 30 ದಿನಗಳಿಗಾಗಿ ಯಾರಿಂದಲೂ ತಕರಾರು ಅರ್ಜಿ ಬಾರದಿರುವ ಮೇರೆಗೆ ಮತ್ತು ಅನುಬೋಗದ ಮೇರೆಗೆ ಅಂದರೆ ಜಮೀನು ಸ್ವಾಧೀನದಲ್ಲಿರುವುದು ಕಂಡುಬಂದಿದ್ದರಿಂದ ಸಂಬಂಧಿಸಿದ ರಾಜಸ್ವ ನಿರೀಕ್ಷಕರಾದ ಆ.ಸ.ನೌ-2 ಇವರಿಗೆ ಹಾಜರು ಪಡಿಸಿ ಆದೇಶ ಪಡೆದು ನಂತರ ಗಣಕ ಶಾಖೆಗೆ ವಹಿವಾಟು ನೀಡಿದ್ದು ಅಮ್ಮಯಮ್ಮ ಕೋಂ ಹೆಂಜರಪ್ಪ, ಲಕ್ಷ್ಮೀ, ಲತಾ, ಸರೋಜ, ಯಶೋದ, ಹರೀಶ್ ಕುಮಾರ್ ರವರುಗಳಿಗೆ 1 ಎಕರೆ 9 ಗುಂಟೆ ಜಮೀನನ್ನು ಜಂಟಿಯಾಗಿ ದಿನಾಂಕ: 12/03/2013 ರಂದು ಖಾತೆಗೆ ದಾಖಲಾಗಿರುತ್ತದೆ. ನಂತರ ತಾನು ಅಲ್ಲಿಂದ ವರ್ಗಾವಣೆಯಾಗಿರುತ್ತದೆ ಅಂತಾ ಹೇಳಿರುತ್ತಾರೆ.

8. ಮುಂದುವರೆದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಗೂ ಕಂದಾಯ ಭೂ ಅಧಿನಿಯಮಗಳ ನಡುವಳಿಯಂತೆ ಯಾವುದೇ ಖಾತೆ ಬದಲಾವಣೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರು ತಮ್ಮ ಅರ್ಜಿಯನ್ನು ಮೊದಲು ತಾಲ್ಲೂಕು ಕಛೇರಿಯಲ್ಲಿರುವ ಗಣಕ ಶಾಖೆ ಅಧಿಕಾರಿಗಳಿಗೆ ನೀಡಬೇಕಾಗಿರುತ್ತದೆ. ತದನಂತರ, ಗಣಕ ಶಾಖೆಯ ಅಧಿಕಾರಿಗಳು ಸದರಿ ಅರ್ಜಿಗಳೊಂದಿಗೆ ಲಗತ್ತಿಸಿದ ದಾಖಲೆಗಳನ್ನು ಪರಿಶೀಲಿಸಿ ಅವರಿಗೆ ಸರಿಯೆಂದು ಕಂಡುಬಂದಲ್ಲಿ, ತಮ್ಮ ಗಣಕ ಶಾಖೆಯಲ್ಲಿ ಚೆಕ್ ಲಿಸ್ಟ್ ಜನರೇಟ್ ಮಾಡಿ (ನಮೂನೆ-21, 12 ಮತ್ತು ಮ್ಯುಟೇಷನ್ ರಿಜಿಸ್ಟರ್ ಪಟ್ಟಿ) ಸಂಬಂಧಪಟ್ಟ ರಾಜಸ್ವ ನಿರೀಕ್ಷಕರಿಗೆ ಮುಂದಿನ ಪ್ರಕ್ರಿಯೆ ಪೂರೈಸಲು ರವಾನಿಸುವ ಕರ್ತವ್ಯವಾಗಿರುತ್ತದೆ. ಈ ಪ್ರಕಾರ ತಾನು ಕ್ರಮ ತೆಗೆದುಕೊಂಡಿರುತ್ತೇನೆ ಅಂತಾ ಹೇಳಿರುತ್ತಾರೆ. ಒಂದು ವೇಳೆ ದೂರುದಾರರಿಗೆ ಆದೇಶದಿಂದ ಅನ್ಯಾಯವಾಗಿದ್ದರೆ ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸುವುದು ಹಾಗೂ ನ್ಯಾಯಾಲಯದ ಮೊರೆ ಹೋಗುವ ಅವಕಾಶವನ್ನು ಕರ್ನಾಟಕ ಭೂ ಅಧಿನಿಯಮಗಳಲ್ಲಿ ಕಲ್ಪಿಸಿರುತ್ತದೆ. ದೂರುದಾರರು ಸದರಿ ಅವಕಾಶಗಳನ್ನು ಪಡೆಯದೇ ನೇರವಾಗಿ ಈ ಸಂಸ್ಥೆಗೆ ದೂರನ್ನು ನೀಡಿರುತ್ತಾರೆ. ಆದ್ದರಿಂದ, ತಮ್ಮನ್ನು

ದೋಷಮುಕ್ತಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆ.ಸ.ನೌ-2 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಆ.ಸ.ನೌ-1 ರವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನೇ ಸಲ್ಲಿಸಿರುತ್ತಾರೆ.

9. ಆ.ಸ.ನೌ-3 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಶ್ರೀ. ಎಸ್. ಮಾರ್ಕಂಡೇಯಸ್ವಾಮಿ ರವರು ಕೊಡಗೆಹಳ್ಳಿ ಗ್ರಾಮದ ಸರ್ವೆ ನಂ.87ರ 1 ಎಕರೆ 9 ಗುಂಟೆ ಜಮೀನಿನ ಖಾತೆ, ಪಹಣಿ ಬಗ್ಗೆ ದಿನಾಂಕ: 05/10/2013 ರಂದು ನೆಲಮಂಗಲ ತಾಲ್ಲೂಕು ಸಿವಿಲ್ ನ್ಯಾಯಾಲಯದ ಪ್ರಕರಣ ಸಂಖ್ಯೆ: ಓ.ಎಸ್ ನಂ.1164/2009ರ ಆದೇಶವನ್ನು ಅಸಿಂಧು ಎಂದು ಪರಿಗಣಿಸಿ ತೀರ್ಪನ್ನು ವಜಾಗೊಳಿಸಿರುತ್ತಾರೆ. ಈ ಕಾರಣಗಳಿಂದಾಗಿ ಜಿಲ್ಲಾ ನ್ಯಾಯಾಲಯದ ಆದೇಶದಂತೆ ಮೊದಲಿದ್ದ ತನ್ನ ಖಾತೆಯನ್ನು ಮುಂದುವರೆಸಬೇಕೆಂದು ಅಂದರೆ ಆರ್.ಎ (ನೆ) 129/2006-07 ದಿನಾಂಕ: 16/10/2009 ರಂತೆ ಬದಲಾಯಿ ಕೊಡಬೇಕೆಂದು ಮನವಿಯನ್ನು ತಹಶೀಲ್ದಾರ್, ನೆಲಮಂಗಲ ರವರ ಕಛೇರಿಗೆ ಅರ್ಜಿಯನ್ನು ನೀಡಿರುತ್ತಾರೆ.

10. ಮುಂದುವರೆದು, ಅದರಂತೆ ಸದರಿ ಮನವಿಯನ್ನು ತಾಲ್ಲೂಕು ಕಛೇರಿಯ ನಂ.ಆರ್‌ಆರ್‌ಟಿ/ಸಿ/ಸಿಆರ್/372/2013-14 ದಿನಾಂಕ: 04/06/2014 ರಂತೆ ದಾಖಲಿಸಿಕೊಂಡು ಅದನ್ನು ರಾಜಸ್ವ ನಿರೀಕ್ಷಕರಿಗೆ ರವಾನಿಸಿ ವರದಿ ನೀಡಲು ತಿಳಿಸಿರುತ್ತಾರೆ. ನಂತರ ಅರ್ಜಿದಾರರ ಮನವಿ ಮತ್ತು ನ್ಯಾಯಾಲಯದ ಆದೇಶವನ್ನು ಪುರಸ್ಕರಿಸಿ ನಿಯಮದಂತೆ ಗಣಕ ಶಾಖೆಯಲ್ಲಿ ಚೆಕ್ ಲಿಸ್ಟ್ ಹೊರಡಿಸಬೇಕೆಂದು ಕೋರಿ ಕಡತವನ್ನು ಕಛೇರಿಗೆ ನೀಡಿದ್ದಾಗಿತ್ತು. ಅದರಂತೆ, ಗಣಕ ಶಾಖೆಯಿಂದ ಖಾತೆ, ಪಹಣಿ ಬದಲಾವಣೆ ಮಾಡಲು ಕರ್ನಾಟಕ ಭೂ ಕಂದಾಯ ಅಧಿನಿಯಮ 46 ಮತ್ತು 65ರ ಅಡಿಯಲ್ಲಿ ಕೊಡಿಗೆಹಳ್ಳಿ ಕಂದಾಯ ವೃತ್ತದಲ್ಲಿ ನಮೂನೆ-21ನ್ನು ದಿನಾಂಕ: 23/06/2014 ರಂದು ಜಾರಿ ಮಾಡಲು ರಾಜಸ್ವ ನಿರೀಕ್ಷಕರಿಗೆ ನೀಡಿದ್ದು, ಅವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿ ಮಾಡಿ ವರದಿ ನೀಡಲು ತಿಳಿಸಿದ್ದ ಮೇರೆಗೆ ನಮೂನೆ-21ನ್ನು ನಿಯಮದಂತೆ ಗ್ರಾಮದಲ್ಲಿ ಗ್ರಾಮಸ್ಥರ ಗಮನಕ್ಕೆ ತಂದು ಜಾರಿ ಮಾಡಿದ್ದು ಇರುತ್ತದೆ. ನ್ಯಾಯಾಲಯದ ತೀರ್ಪು ಇದ್ದರೂ ಸಹಿತ ಖಾತೆ/ಪಹಣಿ ಬದಲಾಣೆ ಮಾಡಲು ಕರ್ನಾಟಕ ಭೂ ಕಂದಾಯ ಅಧಿನಿಯಮ 46 ಮತ್ತು 65ರಲ್ಲಿ ನಿಯಮ ಪಾಲಿಸುವುದು

ಕಡ್ಡಾಯವಾಗಿರುತ್ತದೆ. ಮುಂದುವರೆದು, ಇದೆ ಖಾತೆ ಮತ್ತು ಪಹಣಿಗೆ ಸಂಬಂಧಿಸಿದಂತೆ ಶ್ರೀಮತಿ. ಜಯಮ್ಮ ಬಿನ್ ಮುರಾರಪ್ಪ, ನರಸಯ್ಯ ಕೋಂ ವೆಂಕಟ್ಟ ಕಂಬೇನಹಳ್ಳಿ, ದೊಡ್ಡಬೆಲಹೊಂಗಲ ಹೋಬಳಿ ರವರು ತಹಶೀಲ್ದಾರ್ ನೆಲಮಂಗಲ ತಾಲ್ಲೂಕು ಕಛೇರಿಗೆ ತಕರಾರು ನೀಡಿದ್ದು, ಅದರಂತೆ ತಾಲ್ಲೂಕು ಕಛೇರಿಯಲ್ಲಿ ನಂ.ಆರ್‌ಆರ್‌ಟಿ/ಸಿ/ಸಿಆರ್/152/2014–15 ದಿನಾಂಕ: 07/07/2014ರಂತೆ ಅರ್ಜಿಯನ್ನು ದಾಖಲಿಸಿದ್ದು ಇರುತ್ತದೆ. ಅದೇ ರೀತಿ ಶ್ರೀ. ಹೆಚ್ ಶ್ರೀನಿವಾಸ್ ಬಿನ್ ಹೆಂಜರಪ್ಪ ರವರು ಸಹ ತಹಶೀಲ್ದಾರ್ ನೆಲಮಂಗಲ ತಾಲ್ಲೂಕು ಕಛೇರಿಗೆ ಪ್ರಮಾಣ ಪತ್ರದ ವಂಶವೃಕ್ಷವನ್ನು ಲಗತ್ತಿಸಿ ಇವರು ಸಹ ತಕರಾರು ನೀಡಿದ್ದು, ಅದರಂತೆ ತಾಲ್ಲೂಕು ಕಛೇರಿಯಲ್ಲಿ ನಂ.ಆರ್‌ಆರ್‌ಟಿ/ಸಿ/ಸಿಆರ್/154/2014–15 ದಿನಾಂಕ: 04/07/2014 ರಂತೆ ಅರ್ಜಿಯನ್ನು ದಾಖಲಿಸಿದ್ದು, ಈ ಇಬ್ಬರ ತಕರಾರು ಅರ್ಜಿಯನ್ನು ರಾಜಸ್ವ ನಿರೀಕ್ಷಕರಿಗೆ ನೀಡಿದ್ದು ಇರುತ್ತದೆ. ಈಗ ಸದರಿ ಕಡತವು ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿಯ ನಾಡಕಛೇರಿ ಉಪ ತಹಶೀಲ್ದಾರ್ ರವರ ಕಾರ್ಯಾಲಯದಲ್ಲಿ ನಂ.ಎನ್.ಕೆ.ಟಿ/ಆರ್.ಆರ್.ಟಿ(ವಿವಾದ)ಸಿ.ಆರ್/31/2014–15 ರಂತೆ ವಿವಾದಸ್ಪದ ಪ್ರಕರಣ ಎಂದು ದಾಖಲಾಗಿ ವಿಚಾರಣೆ ಹಂತದಲ್ಲಿರುತ್ತದೆ. ಅಲ್ಲದೇ, ಈ ಬಗ್ಗೆ ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯ ಬೆಂಗಳೂರುನಲ್ಲಿ ಸಹ ರಿಟ್ ಪಿಟಿಷನ್ ನಂ.33714/2014ರಲ್ಲಿ ಪ್ರಕರಣ ದಾಖಲಾಗಿದ್ದು ಇರುತ್ತದೆ. ಆದ್ದರಿಂದ, ತಮ್ಮನ್ನು ದೋಷಮುಕ್ತಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

11. ಆ.ಸ.ನೌ–4 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಆ.ಸ.ನೌ–4 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಆ.ಸ.ನೌ–3 ರವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನೇ ಸಲ್ಲಿಸಿರುತ್ತಾರೆ.

12. ಈ ವಿಚಾರಣೆಯಲ್ಲಿ, ಆ.ಸ.ನೌರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 14 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ 1, 2, 3 ಮತ್ತು 4 ರವರು ಡಿ.ಡಬ್ಲ್ಯೂ.4,

ಡಿ.ಡಬ್ಲ್ಯೂ.3, ಡಿ.ಡಬ್ಲ್ಯೂ.2 ಮತ್ತು ಡಿ.ಡಬ್ಲ್ಯೂ.1 ಎಂದು ಅನುಕ್ರಮವಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ ಮತ್ತು ನಿ.ಡಿ.1 ರಿಂದ ನಿ.ಡಿ.5 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

13. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

14. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

15. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

16. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಆ.ಸ.ನೌ–2 ರವರು ವಿರುದ್ಧ ಸಕಾರಾತ್ಮಕವಾಗಿ.**
**ಆ.ಸ.ನೌ–1, 3 & 4 ರವರುಗಳ ವಿರುದ್ಧ ನಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

17. ಈ ಪ್ರಕರಣದ ಸಾರಾಂಶವೇನೆಂದರೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂ.87ರ 1 ಎಕರೆ 9 ಗುಂಟೆ ಜಮೀನು ಇದು ಮೂಲತಃವಾಗಿ ನರಸಯ್ಯ ಅಲಿಯಾಸ್ ಮುರಯ್ಯ ತಂದೆ ಭರಮಣ್ಣ ಇವರಿಗೆ ಸೇರಿದ್ದು ಇದ್ದು, ಇದನ್ನು ಈತನು

ದೂರುದಾರರ ಮಾವನಾದ ಮಾರ್ಕಂಡೇಯಸ್ವಾಮಿ ರವರಿಗೆ ದಿನಾಂಕ: 10/07/1961 ರಂದು ನೋಂದಣಿ ಕ್ರಯಾ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ನಂತರ ಮಾರ್ಕಂಡೇಯಸ್ವಾಮಿ ರವರ ಹೆಸರಿನಲ್ಲಿ ಎಂ.ಆರ್ ನಂ.6/61–62 ರಂತೆ ಮ್ಯುಟೇಷನ್ ಅಂಗೀಕಾರವಾಗಿರುತ್ತದೆ. ನಂತರ ನರಸಯ್ಯ ನವರ ಮಗನಾದ ಹೆಂಜರಪ್ಪ ರವರ ಹೆಸರಿನಲ್ಲಿ 1988–89 ರಲ್ಲಿ ಆತನ ಹೆಸರಿಗೆ ಖಾತೆಯಾಗಿದ್ದು, ಈ ಬಗ್ಗೆ ಮಾರ್ಕಂಡೇಯಸ್ವಾಮಿ ರವರು 2005ನೇ ಸಾಲಿನಲ್ಲಿ ತಹಶೀಲ್ದಾರ್ ಕಾರ್ಯಾಲಯ ನೆಲಮಂಗಲದಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ, ತಾನು ಸದರಿ ಜಮೀನನ್ನು ಕ್ರಯಾ ಪತ್ರದ ಮೂಲಕ ಪಡೆದುಕೊಂಡಿದ್ದು, ಹೆಂಜರಪ್ಪ ರವರ ಹೆಸರನ್ನು ತೆಗೆದು ಹಾಕಿ ತನ್ನ ಹೆಸರು ಸೇರಿಸಬೇಕೆಂದು ಕೇಳಿಕೊಂಡಿದ್ದು, ಆ ಪ್ರಕಾರ ತಹಶೀಲ್ದಾರ್ ರವರು ಆದೇಶ ಮಾಡಿದ್ದು ಇರುತ್ತದೆ. ನಂತರ ಹೆಂಜರಪ್ಪ ನವರ ಹೆಂಡತಿ ಅಮ್ಮಯಮ್ಮ ಮತ್ತು ಆಕೆಯ ಮಕ್ಕಳು ಮಾರ್ಕಂಡೇಯಸ್ವಾಮಿ ರವರ ವಿರುದ್ಧ ಅಸಲು ದಾವಾ ನಂ.1164/2009 (ಹಳೆ ನಂ.580/2008)ನ್ನು ದಾಖಲು ಮಾಡಿದ್ದು, ಅದು ನಂತರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲಕ್ಕೆ ವರ್ಗಾವಣೆಯಾಗಿರುತ್ತದೆ. ಸದರಿ ದಾವೆಯಲ್ಲಿ ಅಮ್ಮಯಮ್ಮ ಮತ್ತು ಆಕೆಯ ಮಕ್ಕಳು ತಾವು ಮೇಲೆ ಹೇಳಿದ ಆಸ್ತಿಯಲ್ಲಿ ವ್ಯತಿರಿಕ್ತ ಕಬ್ಜ ಮತ್ತು ಶಾಶ್ವತ ನಿಬಂಧರ್ಕಾಜ್ಞೆಗಾಗಿ ದಾಖಲಿಸಿದ್ದು, ಸದರಿ ದಾವೆಯು ದಿನಾಂಕ: 03/10/2012 ರಂದು ತೀರ್ಪಾಗಿದ್ದು, ಅದರಲ್ಲಿ ಪ್ರತಿವಾದಿ ಸದರಿ ಆಸ್ತಿಗೆ ಯಾವುದೇ ರೀತಿಯಿಂದ ಪ್ರತಿವಾದಿಯು (ಮಾರ್ಕಂಡೇಯಸ್ವಾಮಿ) ತಕರಾರು ಮಾಡಬಾರದು ಅಂತಾ ಭಾಗಶಃವಾಗಿ ಡಿಕ್ರಿ ಮಾಡಿರುತ್ತಾರೆ. ಅದರ ವಿರುದ್ಧ ಮಾರ್ಕಂಡೇಯಸ್ವಾಮಿ ರವರು ಆರ್.ಎ ನಂ.433/2012ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಮಂಜೂರಾಗಿ ಪುನಃ ವಿಚಾರಣೆಯನ್ನು ಮಾಡಬೇಕೆಂದು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ದೂರುದಾರರಾದ ಶ್ರೀ. ಎಂ.ವಿ ಬಸವರಾಜು ರವರು ಆ.ಸ.ನೌ ರವರುಗಳ ವಿರುದ್ಧ ಈ ದೂರನ್ನು ಸಲ್ಲಿಸಿರುತ್ತಾರೆ. ದೂರಿನಲ್ಲಿ ಆ.ಸ.ನೌ–1 ಮತ್ತು 2 ರವರು ಅಸಲು ದಾವಾ ನಂ.1164/2009 (ಹಳೆ ನಂ.580/2008) ರಲ್ಲಿಯ ವಿಷಯನ್ನು ಸರಿಯಾಗಿ ತಿಳಿದುಕೊಳ್ಳದೇ ಅಮ್ಮಯಮ್ಮ ಮತ್ತು ಆಕೆಯ ಮಕ್ಕಳ ಹೆಸರಿನಲ್ಲಿ ಮ್ಯುಟೇಷನ್ ಮಾಡಿದ್ದು ಕಾನೂನು ಬಾಹಿರವಾಗಿರುತ್ತದೆ. ಅಲ್ಲದೇ, ತನ್ನ ಮಾವನಾದ ಮಾರ್ಕಂಡೇಯಸ್ವಾಮಿ ರವರು

ಆರ್.ಎ ನಂ.433/2012 ರಲ್ಲಿ ಆದ ತೀರ್ಪಿನಂತೆ ಆ.ಸ.ನೌ–3 ಮತ್ತು 4 ರವರು ಮ್ಯುಟೇಷನ್ ಮಾಡಿರುವುದಿಲ್ಲ ಅಂತಾ ದೂರನ್ನು ಸಲ್ಲಿಸಿರುತ್ತಾರೆ.

18. ಈ ಪ್ರಕರಣದಲ್ಲಿ ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಎಂ.ವಿ ಬಸವರಾಜು, ರೈಲ್ವೆ ಗೊಲ್ಲಹಳ್ಳಿ ಗೇಟ್ ಹತ್ತಿರ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಸಾಕ್ಷ್ಯ ಮಾಡಿಸಿರುತ್ತಾರೆ, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನ್ನ ಮಾವನಾದ ಮಾರ್ಕಂಡೇಯಸ್ವಾಮಿ ರವರು ಆಸ್ತಿಯನ್ನು ಖರೀದಿ ಮಾಡಿದ ನಂತರ ಖರೀದಿ ಪತ್ರದಂತೆ ಆರ್.ಟಿ.ಸಿಯಲ್ಲಿ ನಮೂದು ಆಗಿರುವುದಿಲ್ಲ. ನಂತರ ಕ್ರಯಾ ಮಾಡಿಕೊಟ್ಟ ನರಸಯ್ಯ ನವರು ಮೃತಪಟ್ಟಿದ್ದು ಹಾಗೂ ಅವರ ಮಗ ಹೆಂಜರಪ್ಪ ನವರು ಮೃತಪಟ್ಟಿದ್ದು, ಹೆಂಜರಪ್ಪ ನವರ ಹೆಂಡತಿ ಮತ್ತು ಮಕ್ಕಳು ತಹಶೀಲ್ದಾರ್ ರವರಿಗೆ ಅರ್ಜಿ ನೀಡಿ ತಮ್ಮ ಹೆಸರಿಗೆ ಖಾತೆ ಮಾಡಬೇಕೆಂದು ಕೋರಿದ್ದು, ಸದರಿ ಅರ್ಜಿಯು ತಿರಸ್ಕೃತಗೊಂಡಿರುತ್ತದೆ ಅಂತಾ ಹೇಳಿರುತ್ತಾರೆ. ನಂತರ ಹೆಂಜರಪ್ಪ ನವರ ಹೆಂಡತಿ ಮತ್ತು ಮಕ್ಕಳು ಓ.ಎಸ್. ನಂ.1164/2009ನ್ನು ದಾಖಲು ಮಾಡಿದ್ದು, ಮೇಲಿನಂತೆ ಭಾಗಶಃ ಡಿಕ್ರಿಯಾಗಿರುತ್ತದೆ ಅಂತಾ ಹೇಳಿರುತ್ತಾರೆ. ನಂತರ ಹೆಂಜರಪ್ಪ ನವರ ಹೆಂಡತಿ ಮತ್ತು ಮಕ್ಕಳು ಓ.ಎಸ್. ನಂ.1164/2009ರಲ್ಲಿ ಆದಂತಃ ತೀರ್ಪಿನ ಆಧಾರದ ಮೇಲೆ ತಮ್ಮ ಹೆಸರಿಗೆ ಖಾತೆ ಮಾಡಬೇಕೆಂದು ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದು, ಅದನ್ನು ಆ.ಸ.ನೌ–1 ಮತ್ತು 2 ರವರು ಸೇರಿಕೊಂಡು ರಾಜಿ ಡಿಕ್ರಿಯಂತೆ ಖಾತೆ ಬದಲಾವಣೆ ಮಾಡಿಕೊಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ತನ್ನ ದೂರಿನಲ್ಲಿ ಮಾರ್ಕಂಡೇಯಸ್ವಾಮಿಗೆ ಯಾವುದೇ ಮಾಹಿತಿಯನ್ನು ನೀಡದೇ ಸದರಿ ಮ್ಯುಟೇಷನ್ ಆಗಿರುತ್ತದೆ ಅಂತಾ ದೂರು ಸಲ್ಲಿಸಿರುತ್ತಾರೆ.

19. ಆ.ಸ.ನೌ–1 ಮತ್ತು 2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಆ.ಸ.ನೌ–1 ರವರು ತಾನು ಗ್ರಾಮ ಲೆಕ್ಕಿಗನಾಗಿ ಕೆಲಸ ಮಾಡುತ್ತಿದ್ದಾಗ ಹಾಗೂ ಆ.ಸ.ನೌ–2 ರವರು ರಾಜಸ್ವ ನಿರೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ಉಪ

ವಿಭಾಗ ಪ್ರಕರಣ ಸಂಖ್ಯೆ: ಆರ್.ಎ (ನೆ) 129/2006–07ರ ಆದೇಶ ದಿನಾಂಕ: 16/10/2009 ರಂತೆ ಎಂ.ಆರ್ 46/2010–11 ರಂತೆ ಇ.ಆರ್ ನಂ.49/2010–11 ರಂತೆ ಗಣಕ ಶಾಖೆಯಲ್ಲಿ ಚೆಕ್ ಲಿಸ್ಟ್ ಆಗಿಬಂದಂತೆ ಹೆಂಜಾರಪ್ಪ ಬಿನ್ ನರಸಯ್ಯ ಉರ್ಫ್ ಮುರಾರಯ್ಯ ರವರಿಂದ ಶ್ರೀ. ಎಸ್. ಮಾರ್ಕಂಡೇಯಸ್ವಾಮಿ ರವರು ಎಂ.ಆರ್ ನಂ.46/2010–11 ದಿನಾಂಕ: 27/03/2011ರ ನಂತರ ರಾಜಸ್ವ ನಿರೀಕ್ಷಕರಿಂದ ಆದೇಶ ಪಡೆದು ಖಾತೆ ಮಾಡಿದ ನಂತರ ಮ್ಯುಟೇಷನ್ ಅಂಗೀಕರಿಸಲಾಗಿತ್ತು. ನಂತರ ಜೆ.ಎಂ.ಎಫ್.ಸಿ ನ್ಯಾಯಾಲಯ ಆದೇಶದ ಸಂಖ್ಯೆ: ಓ.ಎಸ್. ನಂ.1164/2009–10 ಹಳೆ ಓ.ಎಸ್ ನಂ.580/2008 ರ ಡಿಕ್ರಿ ಆದೇಶದಂತೆ ವಿಭಾಗ ಪತ್ರದ ಮೇರೆಗೆ ಗಣಕ ಶಾಖೆಯಿಂದ ಬಂದ ಪಿ.ಆರ್ ನಂ.29/2012–13, ಎಂ.ಆರ್ ನಂ.10/2012–13 ರಂತೆ ಗ್ರಾಮ ನಮೂನೆ 21 ರನ್ನು ಪ್ರಚೂರ ಪಡಿಸಿರುತ್ತೇವೆ. ಮುಂದುವರೆದು, ನಿಗಧಿತ ಅವಧಿ 30 ದಿನಗಳಿಗಾಗಿ ಯಾರಿಂದಲೂ ತಕರಾರು ಅರ್ಜಿ ಬಾರದಿರುವ ಮೇರೆಗೆ ಮತ್ತು ಅನುಬೋಗದ ಮೇರೆಗೆ ಅಂದರೆ ಜಮೀನು ಸ್ವಾಧೀನದಲ್ಲಿರುವುದು ಕಂಡುಬಂದಿದ್ದರಿಂದ ಸಂಬಂಧಿಸಿದ ರಾಜಸ್ವ ನಿರೀಕ್ಷಕರಾದ ಆ.ಸ.ನೌ–2 ಇವರಿಗೆ ಹಾಜರು ಪಡಿಸಿ ಆದೇಶ ಪಡೆದು ನಂತರ ಗಣಕ ಶಾಖೆಗೆ ವಹಿವಾಟು ನೀಡಿದ್ದು ಅಮ್ಮಯಮ್ಮ ಕೋಂ ಹೆಂಜರಪ್ಪ, ಲಕ್ಷ್ಮೀ, ಲತಾ, ಸರೋಜ, ಯಶೋದ, ಹರೀಶ್ ಕುಮಾರ್ ರವರುಗಳಿಗೆ 1 ಎಕರೆ 9 ಗುಂಟೆ ಜಮೀನನ್ನು ಜಂಟಿಯಾಗಿ ದಿನಾಂಕ: 12/03/2013 ರಂದು ಖಾತೆಗೆ ದಾಖಲಾಗಿರುತ್ತದೆ. ಆ.ಸ.ನೌ–1 ರವರು ತಮ್ಮನ್ನು ಡಿ.ಡಬ್ಲ್ಯೂ.4 ಎಂದು ಮತ್ತು ಆ.ಸ.ನೌ–2 ರವರು ತಮ್ಮನ್ನು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿರುತ್ತಾರೆ. ಆ.ಸ.ನೌ–1 ರವರು ತಮ್ಮ ಸಾಕ್ಷಿಯಲ್ಲಿ ತನಗೆ ಆ.ಸ.ನೌ–2 ರವರ ಕಡೆಯಿಂದ ದಿನಾಂಕ: 11/02/2013ಕ್ಕೆ ನಮೂನೆ–21, 12 ಹಾಗೂ ನಿಯಮ 46 ನಮೂನೆಗಳು ಬಂದಿದ್ದು, ಅದರಂತೆ ನಮೂನೆ–21ನ್ನು ಗ್ರಾಮದ ಮುಖ್ಯ ಚಾವಡಿಯಲ್ಲಿ ಪ್ರಚೂರಪಡಿಸಿರುತ್ತೇನೆ ಮತ್ತು 30 ದಿನಗಳ ಕಾಲಾವಕಾಶ ಕೊಟ್ಟಿದ್ದು ಈ ಅವಧಿಯಲ್ಲಿ ಯಾವುದೇ ತಕರಾರುಗಳು ಬರದ ಕಾರಣ ತನ್ನ ವರದಿಯನ್ನು ತಯಾರಿಸಿ ಆ.ಸ.ನೌ–2 ಇವರಿಗೆ ಕಳುಹಿಸಿಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ.

20.ಆ.ಸ.ನೌ–2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ವ್ಯಾಪ್ತಿಯಲ್ಲಿ ಖಾತಾ ಬದಲಾವಣೆ ಆದೇಶ ಹೊರಡಿಸುವುದು ತನ್ನ ಕರ್ತವ್ಯವಾಗಿದ್ದು, ಹೆಂಜರಪ್ಪನವರ ಮಕ್ಕಳು ಸಿವಿಲ್ ಕೋರ್ಟ್ ಓ.ಎಸ್ ನಂ.1164/2009 ಆದೇಶದಂತೆ ಖಾತೆ ಬದಲಾವಣೆ ಪ್ರಯುಕ್ತ ಅರ್ಜಿ ಸಲ್ಲಿಸಿದ್ದು, ಇವರ ಹತ್ತಿರ ದಿನಾಂಕ: 11/02/2013 ರಂದು ಬಂದಿರುತ್ತದೆ ಅಂತಾ ನುಡಿದಿರುತ್ತಾರೆ. ನಂತರ ತಾನು ಆ.ಸ.ನೌ–1 ರವರಿಗೆ ದಾಖಲಾತಿಗಳನ್ನು ಕಳುಹಿಸಿಕೊಟ್ಟಿದ್ದು, ಆ.ಸ.ನೌ–1 ರವರು ಅದನ್ನು ಪ್ರಚೂರಪಡಿಸಿ 30 ದಿನಗಳ ಅವಧಿಯಲ್ಲಿ ಯಾವುದೇ ತಕರಾರು ಬರದ ಕಾರಣ ಮತ್ತೇ ಸದರಿ ದಾಖಲಾತಿಗಳನ್ನು ತನಗೆ ಕಳುಹಿಸಿಕೊಟ್ಟಿದ್ದು, ತಾನು ಯಾವುದೇ ತಕರಾರು ಬಾರದ ಕಾರಣ ಮ್ಯುಟೇಷನ್ ಮಾಡಲು ಆದೇಶಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ದೂರುದಾರರು (ಪಿ.ಡಬ್ಲ್ಯೂ.1) ರವರು ತಮ್ಮ ಪಾಟಿಸವಾಲಿನಲ್ಲಿ ಹೆಂಜರಪ್ಪನವರ ಮಕ್ಕಳು ಅಸಲು ದಾವಾ ನಂ.1164/2009ರ ಆಧಾರದ ಮೇಲೆ ತಮ್ಮ ಹೆಸರಿನಲ್ಲಿ ಖಾತೆಯಾಗಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ ಅಂತಾ ಒಪ್ಪಿಕೊಂಡಿರುತ್ತಾರೆ. ನಂತರ ಆ.ಸ.ನೌ–1 ಮತ್ತು 2 ರವರುಗಳು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಚೆಕ್ ಲಿಸ್ಟ್ ಮಾಡಿರುತ್ತಾರೆ ಎನ್ನುವುದಕ್ಕೆ ತನಗೆ ಗೊತ್ತಿಲ್ಲವೆಂದು ಅದೇ ರೀತಿ ನಮೂನೆ–12 ಮತ್ತು 21ನ್ನು ಹೊರಡಿಸಿರುತ್ತಾರೆ ಎಂದರೆ ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಸದರಿ ಅರ್ಜಿಗೆ ಯಾವುದೇ ತಕರಾರು ಬಂದಿರಲಿಲ್ಲ ಎಂದು ಮಾಡಿದ ಸಲಹೆಗೆ ತನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. ದೂರುದಾರರ ಪ್ರಕಾರ ಸದರಿ ಆಸ್ತಿಯು ಈತನ ಮಾವನಾದ ಮಾರ್ಕಂಡೇಯಸ್ವಾಮಿ ನವರಿಗೆ ಸೇರಿದ್ದು ಇದ್ದು, ಈತನಿಗೆ ನೋಟಿಸ್ ಕಳುಹಿಸುವ ಅವಶ್ಯಕತೆ ಇರಲಿಲ್ಲ ಏಕೆಂದರೆ ಈತನು ಸದರಿ ದಾವೆಗೆ ಪಕ್ಷಕಾರನಾಗಿ ಇರಲಿಲ್ಲ. ಆದ್ದರಿಂದ ದೂರುದಾರರ ಗಮನಕ್ಕೆ ತರಬೇಕಾಗಿದ್ದು ಇರುವುದಿಲ್ಲ. ದೂರುದಾರರು ಮ್ಯುಟೇಷನ್ ಪ್ರತಿಯನ್ನು ಸಲ್ಲಿಸಿದ್ದು, ನಿ.ಪಿ.8 ಎಂದು ಗುರುತಿಸಲಾಗಿದ್ದು, ಅದರಲ್ಲಿ ಗ್ರಾಮ ಲೆಕ್ಕಿಗರು ಅಂದರೆ ಆ.ಸ.ನೌ–1 ರವರು ಶರಾ ಬರೆದಿದ್ದು, ಷರಾದಲ್ಲಿ ಗ್ರಾಮದಲ್ಲಿ ನಮೂನೆ–21ನ್ನು ಪ್ರಚೂರಪಡಿಸಿದ್ದು ಈ ಕಾಲಾವಧಿಯಲ್ಲಿ ಯಾವುದೇ ತಂಟೆತಕರಾರು ಬಂದಿರುವುದಿಲ್ಲ. ಆರ್.ಟಿ.ಸಿ ಯಂತೆ ತಾಳೆ ಇರುತ್ತದೆ, ಅರ್ಜಿದಾರರಿಗೆ ಸಿವಿಲ್ ನ್ಯಾಯಾಲಯದ ಓ.ಎಸ್.1164/2009 ರಂತೆ ಅರ್ಜಿದಾರರಾದ ಅಮ್ಮಯಮ್ಮ ಮತ್ತು ಅವರ ಮಕ್ಕಳು ಜಂಟಿ ವಿಭಾಗ ಖಾತೆ ಬದಲಾವಣೆ ಮಾಡಲು ಆದೇಶ ಮಾಡಿರುತ್ತಾರೆ ಮತ್ತು

ಗ್ರಾಮಸ್ಥರ ಮಹಜರ್‌ನ್ನು ಲಗತ್ತಿಸಿರುತ್ತಾರೆ ಮತ್ತು ಸಿವಿಲ್ ನ್ಯಾಯಾಲಯದ ಆದೇಶವನ್ನು ಲಗತ್ತಿಸಿರುತ್ತಾರೆ ಹಾಗೂ ಸಿವಿಲ್ ವ್ಯವಹಾರವನ್ನು ಕಾಯ್ದಿರಿಸಿ ಹಾಗೂ ಇತರರಿಗೆ ಇರಬಹುದಾದ ಹಕ್ಕನ್ನು ಕಾಯ್ದಿರಿಸಿ ವಿಭಾಗ ಕೋರ್ಟ್ ಆದೇಶದಂತೆ ಖಾತೆ ಮಾಡಲು ಮುಂದಿನ ತಮ್ಮ ಆದೇಶಕ್ಕೆ ಮಂಡಿಸಿದೆ ಎಂದು ಆ.ಸ.ನೌ–2 ರವರಿಗೆ ಕಳುಹಿಸಿಕೊಟ್ಟಿದ್ದು, ಆ.ಸ.ನೌ–2 ರವರು ಸದರಿ ಮ್ಯುಟೇಷನ್ ಮಂಜೂರು ಮಾಡಿರುತ್ತಾರೆ. ಸದರಿ ಮ್ಯುಟೇಷನ್ ಪ್ರತಿಯನ್ನು ಸಲ್ಲಿಸಿದ್ದು, ಅದನ್ನು ನಿ.ಪಿ.8 ಎಂದು ಗುರುತಿಸಲಾಗಿದ್ದು, ಅದರಲ್ಲಿ ಪುಟ ನಂ.2 ರಲ್ಲಿ ರಾಜಸ್ವ ನಿರೀಕ್ಷಕರು ಸದರಿ ಮ್ಯುಟೇಷನ್ ಬಗ್ಗೆ ಆದೇಶವನ್ನು ಮಾಡಿದ್ದು, ತಮ್ಮ ಆದೇಶದಲ್ಲಿ "ಸೀನಿಯರ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ಆದೇಶದ ನಂ.ಓ.ಎಸ್ ನಂ.1164/2009ರ ರಾಜಿ ಡಿಕ್ರಿ ಆದೇಶದಂತೆ ವಿಭಾಗ ಪತ್ರದ ಮೇರೆ ಖಾತೆ ಮತ್ತು ಪಹಣಿ ದಾಖಲು ಮಾಡಲು ಅಂಗೀಕರಿಸಿದೆ ಎಂದು" ದಿನಾಂಕ: 12/03/2013 ರಂದು ಆದೇಶ ಮಾಡಿರುತ್ತಾರೆ. ದೂರುದಾರರು ಸದರಿ ಸರ್ವೆ ನಂಬರ್‌ನ 2012–13ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.9 ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲಾತಿಯನ್ನು ನೋಡಲಾಗಿ, ಕಾಲಂ ನಂ.9ರಲ್ಲಿ ಅಮ್ಮಯಮ್ಮ ಮತ್ತು ಆಕೆಯ ಮಕ್ಕಳ ಹೆಸರನ್ನು ದಾಖಲಿಸಿದ್ದು ಇರುತ್ತದೆ. ಓ.ಎಸ್ ನಂ.1164/2009ರಂತೆ ಅಮ್ಮಯಮ್ಮ ಮತ್ತು ಆಕೆಯ ಮಕ್ಕಳಿಗೆ ಮಾಲೀಕರು ಇರುತ್ತಾರೆ ಅಂತಾ ಘೋಷಣೆ ಮಾಡಿರುವುದಿಲ್ಲ ಮತ್ತು ಅವರು ಮಾಲೀಕರು ಇರುತ್ತಾರೆ ಅಂತಾ ಡಿಕ್ರಿ ಆಗಿರುವುದಿಲ್ಲ. ಮೇಲಾಗಿ ರಾಜಿ ಡಿಕ್ರಿ ಆಗಿರುತ್ತದೆ ಎನ್ನುವ ಬಗ್ಗೆ ಆ.ಸ.ನೌ–2 ರವರು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಆ.ಸ.ನೌ–2 ರವರು ಓ.ಎಸ್ ನಂ.1164/2009ರಲ್ಲಿ ಆದ ಆದೇಶದ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಅಮ್ಮಯಮ್ಮ ಮತ್ತು ಆಕೆಯ ಮಕ್ಕಳು ಮಾಲೀಕರು ಇರುತ್ತಾರೆ ಅಂತಾ ಮ್ಯುಟೇಷನ್ ಮಾಡಿದ್ದು, ಅದು ಸರಿಯಾಗಿ ಇರುವುದಿಲ್ಲ. ಆದ್ದರಿಂದ, ಆ.ಸ.ನೌ–2 ರವರು ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ಕಂಡು ಬರುತ್ತದೆ. ಆ.ಸ.ನೌ–1 ರವರ ಕರ್ತವ್ಯ ಕೇವಲ, ಆ.ಸ.ನೌ–2 ಇವರು ಕೊಟ್ಟಂತಹ ದಾಖಲಾತಿಗಳನ್ನು ಪ್ರಚೂರ ಪಡಿಸಿದ್ದು ಇರುತ್ತದೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ–1 ಇವರು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ.

21. ದೂರುದಾರರು ಈತನ ಮಾವ ಮಾರ್ಕಂಡೇಯಸ್ವಾಮಿ ಈತನು ದಿನಾಂಕ: 05/10/2013 ರಂದು ತಹಶೀಲ್ದಾರ್ ನೆಲಮಂಗಲ ರವರಿಗೆ ಒಂದು ಅರ್ಜಿಯನ್ನು ಸಲ್ಲಿಸಿದ್ದು, ಅದರಲ್ಲಿ ಓ.ಎಸ್. ನಂ.1164/2009 ರಂತೆ ತನ್ನ ಗಮನಕ್ಕೆ ಬರದೆ ಮ್ಯುಟೇಷನ್ ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ. ಅಲ್ಲದೇ, ಖಾತಾ ಬದಲಾವಣೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ಆದರೆ ಆ.ಸ.ನೌ–3 ಮತ್ತು 4 ರವರು ಖಾತೆ ಬದಲಾವಣೆಯನ್ನು ಮಾಡಿರುವುದಿಲ್ಲ ಅಂತಾ ನುಡಿದಿರುತ್ತಾರೆ ಮತ್ತು ಸದರಿ ದಾಖಲಾತಿಯನ್ನು ನಿ.ಪಿ.12 ಎಂದು ಗುರುತಿಸಲಾಗಿರುತ್ತದೆ.

22. ಪಿ.ಡಬ್ಲ್ಯೂ.1 ರವರು ತಮ್ಮ ಸಾಕ್ಷಿಯಲ್ಲಿ ಆರ್.ಎ ನಂ.433/2012 ರಲ್ಲಿ ಆದ ಆದೇಶದ ಪ್ರಕಾರ, ಪ್ರಕರಣವನ್ನು ಪುನಃ ಸೀನಿಯರ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನೆಲಮಂಗಲ ಪುನಃ ವಿಚಾರಣೆಗೆ ಬಂದಿದ್ದು ಅಲ್ಲಿ (ಓ.ಎಸ್ ನಂ.1164/2009) ವಾದಿಯರು (ಹೆಂಜರಪ್ಪನ ಹೆಂಡತಿ ಮತ್ತು ಮಕ್ಕಳು) ಹಾಜರ್ ಆಗದ ಕಾರಣ ಸದರಿ ದಾವೆಯು ದಿನಾಂಕ: 20/01/2015 ರಂದು Dismiss for default ಅಂತಾ ವಜಾಗೊಂಡಿರುತ್ತದೆ ಅಂತಾ ನುಡಿದಿರುತ್ತಾರೆ. Dismiss for default ಆದ ಬಗ್ಗೆ ಆ.ಸ.ನೌ–3 ಮತ್ತು 4 ರವರು ಒಪ್ಪಿಕೊಂಡಿರುತ್ತಾರೆ. ಪಿ.ಡಬ್ಲ್ಯೂ.1 ರವರು ತಮ್ಮ ಸಾಕ್ಷಿಯಲ್ಲಿ ಸ್ವತ್ತಿನ ಖಾತೆಯನ್ನು ಮಾರ್ಕಂಡೇಯಸ್ವಾಮಿ ರವರ ಹೆಸರಿಗೆ ಬದಲಾವಣೆ ಮಾಡಬೇಕೆಂದು ಅರ್ಜಿಯನ್ನು ಕೊಟ್ಟಿರುತ್ತೇನೆ, ಆ ಸಂದರ್ಭದಲ್ಲಿ ಆ.ಸ.ನೌ–3 ಮತ್ತು 4 ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ತನ್ನ ಅರ್ಜಿಯನ್ನು ಪರಿಗಣಿಸದೇ ನಮೂನೆ–21ನ್ನು ನೀಡಿ, ಆಕ್ಷೇಪಣೆಯನ್ನು ಕೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ತನ್ನ ಪಾಟಿಸವಾಲಿನಲ್ಲಿ Dismiss for default ಆದ ನಂತರ ಪುನಃ ಖಾತೆ ಬದಲಾವಣೆ ಮಾಡಿ ಕೊಡಲು ಅರ್ಜಿಯನ್ನು ಗಣಕ ಶಾಖೆಗೆ ಸಲ್ಲಿಸಿದೆ ಅಂತಾ ಮಾಡಿದ ಸಲಹೆಗೆ ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಆ.ಸ.ನೌ–3 ಮತ್ತು 4 ರವರು ಸದರಿ ಅರ್ಜಿಯ ಆಧಾರದ ಮೇಲೆ ನಮೂನೆ–21 ಮತ್ತು 12 ನ್ನು ಪ್ರಚೂರ ಪಡಿಸಿರುತ್ತಾರೆ, ಆ ವೇಳೆಯಲ್ಲಿ ನರಸಯ್ಯನ ಕಡೆಯವರು ತಕಾರರನ್ನು ಸಲಿಸಿರುತ್ತಾರೆ, ಆದ್ದರಿಂದ ಆ.ಸ.ನೌ–3 ಮತ್ತು 4 ರವರಿಗೆ ಖಾತೆ ಬದಲಾವಣೆ ಮಾಡುವ ಪ್ರಕ್ರಿಯೆಯನ್ನು

ಕೈಗೊಳ್ಳಲು ಸಾಧ್ಯವಾಗಿರುವುದಲ್ಲ ಅಂತಾ ಮಾಡಿದ ಸಲಹೆಗೆ ಆ.ಸ.ನೌ–3 ಮತ್ತು 4 ರವರು ನಮೂನೆ–21ರ ಪ್ರಕಾರ ಪ್ರಚೂರ ಪಡಿಸುವ ಅವಶ್ಯಕತೆ ಇರಲಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು, ತಮ್ಮ ಪಾಟಿಸವಾಲಿನಲ್ಲಿ ತಕರಾರು ಬಂದಿದ್ದರಿಂದ ಆ.ಸ.ನೌ–3 ಮತ್ತು 4 ರವರು ಕಡತವನ್ನು ಉಪ ತಹಶೀಲ್ದಾರರಿಗೆ ಮಂಡಿಸಿದ್ದರು ಎನ್ನುವ ಸಲಹೆಗೆ ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಆ.ಸ.ನೌ–3 ಮತ್ತು 4 ರವರು ಕಾನೂನು ರೀತ್ಯಾ ಕರ್ತವ್ಯ ನಿರ್ವಹಿಸಬೇಕಾಗಿರುವುದರಿಂದ ಅವರು ಖಾತೆ ಬದಲಾವಣೆ ಮಾಡಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ಮುಂದುವರೆದು, ಪ್ರಸ್ತುತ ಅರ್ಜಿಯ ಆದೇಶದ ಮೇಲೆ ತಾನು ಉಪವಿಭಾಗಾಧಿಕಾರಿಗಳ ಮುಂದೆ ಅಪೀಲನ್ನು ಸಲ್ಲಿಸಿರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ.

23. ಆ.ಸ.ನೌ–3 ರವರು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ "ನನಗೆ ಡಿಜಿಓ–4ರವರ ಕಡೆಯಿಂದ ದಿ:23–06–2014ಕ್ಕೆ ನಮೂನೆ–21, ನಮೂನೆ–12 ನಿಯಮ 46ರ ನಮೂನೆಗಳು ಬಂದಿದ್ದವು (ಅಂದರೆ ನಿ.ಡಿ.3, 4, 5). ಅದರಂತೆ ನಮೂನೆ–21ನ್ನು ಗ್ರಾಮದ ಮುಖ್ಯ ಚಾವಡಿಯಲ್ಲಿ ಪ್ರಚುರಪಡಿಸಿರುತ್ತೇನೆ ಮತ್ತು ಅದಕ್ಕೆ 30ದಿವಸ ಕಾಲಾವಕಾಶ ಕೊಟ್ಟಿರುತ್ತೇನೆ.......". ಮುಂದುವರೆದು, "ಈ 30ದಿವಸ ಅವಧಿಯಲ್ಲಿ ಅಂದರೆ ಇನ್ನು 5ದಿವಸಗಳು ಇರಬೇಕಾದರೆ ಡಿಜಿಓ–4ರಿಂದ ಜಯಮ್ಮ ಮತ್ತು ಶ್ರೀನಿವಾಸರವರ ತಕರಾರು ಅರ್ಜಿಗಳು ಬಂದಿರುತ್ತವೆ. ನಂತರ ನಮೂನೆ–21 ಮತ್ತು ತಕರಾರು ಅರ್ಜಿಗಳನ್ನು ಕಡತ ತಯಾರಿಸಿ ಮುಂದಿನ ಆದೇಶಕ್ಕಾಗಿ ರಾಜಸ್ವ ನಿರೀಕ್ಷಕರು ಅಂದರೆ ಡಿಜಿಓ–4ರವರಿಗೆ ಮಂಡಿಸಿರುತ್ತೇನೆ. ನಂತರ ಡಿಜಿಓ–4ರವರು ಸದರಿ ದಾಖಲಾತಿಗಳನ್ನು ಉಪತಹಶೀಲ್ದಾರ ಇವರಿಗೆ ಕಳುಹಿಸಿಕೊಡಬೇಕೆಂದು ನನ್ನಲ್ಲಿ ಕಳುಹಿಸಿಕೊಟ್ಟಿದ್ದು ಅವುಗಳನ್ನೆಲ್ಲಾ ಉಪತಹಶೀಲ್ದಾರರಿಗೆ ಕಳುಹಿಸಿಕೊಟ್ಟಿರುತ್ತೇನೆ" ಅಂತಾ ನುಡಿದಿರುತ್ತಾರೆ.

24. ಆ.ಸ.ನೌ–4 ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ "ನನ್ನ ವ್ಯಾಪ್ತಿಯಲ್ಲಿ ಖಾತಾ ಬದಲಾವಣೆ ಆದೇಶ ಹೊರಡಿಸುವುದು ನನ್ನ ಕರ್ತವ್ಯವಾಗಿತ್ತು. ಈ

ಪ್ರಕರಣದಲ್ಲಿ ಇದ್ದ ದೂರುದಾರನು ನಮ್ಮ ತಾಲ್ಲೂಕು ಕಚೇರಿ ನೆಲಮಂಗಲದಲ್ಲಿ ಅರ್ಜಿ ಸಲ್ಲಿಸಿದ್ದ. ತನ್ನ ಅರ್ಜಿಯಲ್ಲಿ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಆರ್‌ಎ ನಂ. 433/12 ದಿ:7-6-2013ರಲ್ಲಿ ಆದೇಶದ ಪ್ರಕಾರ ಖಾತಾ ಬದಲಾವಣೆ ಮಾಡಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದರು. ಸದರಿ ಅರ್ಜಿಯನ್ನು ನನಗೆ ತಾಲ್ಲೂಕು ಕಚೇರಿಯಿಂದ ಆರ್‌ಆರ್‌ಟಿಸಿಆರ್ ನಂ.372/2013-14 ರ ಪ್ರಕಾರ ದಿ:23-06-2014ರಂದು ನಮೂನೆ 12 ಮತ್ತು ನಮೂನೆ 22ನ್ನು ಉಪ ತಹಶೀಲ್ದಾರ ಮೂಲಕ ಖಾತಾ ಬದಲಾವಣೆ ಪ್ರಕ್ರಿಯೆ ನಡೆಸಲು ನನಗೆ ಬಂತು" ಅಂತಾ ನುಡಿದಿರುತ್ತಾರೆ. ಮುಂದುವರೆದು, "ಸದರಿ ಅರ್ಜಿಯನ್ನು ಸಂಬಂಧಪಟ್ಟ ಗ್ರಾಮದಲ್ಲಿ ಪ್ರಚುರ ಪಡಿಸಲು ಗ್ರಾಮಲೆಕ್ಕಾಧಿಕಾರಿ, ಕೊಡಗೆಹಳ್ಳಿ ವೃತ್ತರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 65ರಡಿ ಗ್ರಾಮದಲ್ಲಿ ದಿ:23-06-2014ರಂದು ಪ್ರಚುರ ಪಡಿಸಿದರು. ಆ ವೇಳೆಯಲ್ಲಿ ಮುನಿರಂಗಸ್ವಾಮಿ (ಡಿಜಿಓ-3) ಇವರು ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ಖಾತೆ ಬದಲಾವಣೆಗೆ ತಕರಾರು ಸಲ್ಲಿಸಲು 30ದಿವಸ ನಿರೀಕ್ಷಣಾ ಅವಧಿ ಇರುತ್ತದೆ. ಸದರಿ ಅವಧಿಯಲ್ಲಿ ಶ್ರೀಮತಿ ಜಯಮ್ಮ ಬಿನ್ ಮುರಾರಪ್ಪ @ ನರಸಯ್ಯ, ಕೋಂ ವೆಂಕಟಪ್ಪ ಮತ್ತು ಹೆಚ್ ಶ್ರೀನಿವಾಸ ತಂದೆ ಹೆಂಜಾರಪ್ಪ, ಎಂಬುವವರು ಕ್ರಮವಾಗಿ ದಿ:2-7-2014 ಮತ್ತು ದಿ:7-7-2014ರಂದು ತಾಲ್ಲೂಕು ಕಚೇರಿ ನೆಲಮಂಗಲ ರವರಿಗೆ ಖಾತೆ ಬದಲಾವಣೆ ಮಾಡದಂತೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗಳು ಆರ್‌ಆರ್‌ಟಿಸಿಆರ್ 152/14-15, ಆರ್‌ಆರ್‌ಟಿಸಿಆರ್ 154/14-15 ರಂತೆ ಉಪತಹಶೀಲ್ದಾರ ಮೂಲಕ ದಿ:17-7-2014 ಮತ್ತು 18-07-2014 ನನಗೆ ಸದರಿ ಅರ್ಜಿಗಳು ಬಂದಿರುತ್ತವೆ. ನಂತರ ಸದರಿ ತಕರಾರು ಅರ್ಜಿಗಳನ್ನು ನಾನು ಗ್ರಾಮಲೆಕ್ಕಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ತಕರಾರು ಅರ್ಜಿಗಳನ್ನು ನನ್ನ ಆಕ್ಷೇಪಣೆಯನ್ನು ಕೇಳಿದಾಗ ಅದರ ಜೊತೆಯಲ್ಲಿ ಸಲ್ಲಿಸಿರುತ್ತೇನೆ. ಶ್ರೀಮತಿ ಜಯಮ್ಮ ಇವರು ಸಲ್ಲಿಸಿದ ತಕರಾರು ಅರ್ಜಿಯನ್ನು ನೋಡುತ್ತಿದ್ದು ಅದನ್ನು **ನಿ.ಡಿ.1** ಎಂದು ಮತ್ತು ಶ್ರೀ ಹೆಚ್. ಶ್ರೀನಿವಾಸ ಇವರು ಸಲ್ಲಿಸಿದ ತಕರಾರು ಅರ್ಜಿಯನ್ನು ನೋಡುತ್ತಿದ್ದು ಅದನ್ನು **ನಿ.ಡಿ.2** ಎಂದು ಗುರುತಿಸಲಾಯಿತು. ಪ್ರಚುರ ಪಡಿಸಿದ ದಿವಸದಿಂದ 30ದಿವಸದವರೆಗೆ ಗ್ರಾಮ ಲೆಕ್ಕಾಧಿಕಾರಿಗಳು ಇಟ್ಟುಕೊಂಡು ತಮ್ಮ ವರದಿಯ ಜೊತೆಗೆ ನನಗೆ ಕಳುಹಿಸಿರುತ್ತಾರೆ" ಎಂದು ನುಡಿದಿರುತ್ತಾರೆ.

ಮುಂದುವರೆದು, "ನಂತರ ನಾನು ಭೂಕಂದಾಯ ನಿಯಮಗಳು 1966ರ ನಿಯಮ 66ರ ಅಡಿಯಲ್ಲಿ ಗ್ರಾಮಲೆಕ್ಕಾಧಿಕಾರಿಯವರ ವರದಿ ಹಾಗೂ ತಕರಾರು ಬಂದ ಅರ್ಜಿಯನ್ವಯ ನಮೂನೆ-12ರಲ್ಲಿ (ಮ್ಯುಟೇಷನ್) ನಮೂದು ಮಾಡಿ ಸದರಿ ದಾಖಲಾತಿಗಳನ್ನು ನಿಯಮ 43ರ ರನ್ವಯ ತಕರಾರು ಅರ್ಜಿಯನ್ನು ಇತ್ಯರ್ಥ ಪಡಿಸುವ ಕುರಿತು ಉಪ ತಹಶೀಲ್ದಾರ ಕಾರ್ಯಾಲಯ, ತ್ಯಾಮಗೊಂಡ್ಲು ಹೋಬಳಿ, ತ್ಯಾಮಗೊಂಡ್ಲು ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಟ್ಟಿರುತ್ತೇನೆ. ನಮೂನೆ -21ನ್ನು ಪ್ರಚುರ ಪಡಿಸಿದ್ದು ಅದನ್ನು **ನಿ.ಡಿ.3** ಎಂದು ಗುರುತಿಸಲಾಯಿತು. ನಮೂನೆ-12 ನ್ನು ಪ್ರಚುರ ಪಡಿಸಿದ್ದು ಅದನ್ನು **ನಿ.ಡಿ.4**ಎಂದು ಗುರುತಿಸಲಾಯಿತು. ಅದೇ ರೀತಿ ನಾನು ಮಾಡಿದ ಆದೇಶ **ನಿ.ಡಿ.5** ಎಂದು ಗುರುತಿಸಲಾಯಿತು".

25. ದೂರುದಾರರ ಪ್ರಕಾರ ಡಿಕ್ರಿಯಾದಾಗ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 128 & 129 ಪಾಲಿಸುವುದು ಅವಶ್ಯಕತೆ ಇರುವುದಿಲ್ಲ ಅಂತಾ ವಾದವಿರುತ್ತದೆ. ಆದರೆ ಈ ಬಗ್ಗೆ ILR 1995 Kar 3295 (Narasegowda vs. Assistant Commissioner) ತೀರ್ಪಿನ ಪ್ಯಾರಾ ನಂ.4ರಲ್ಲಿ ಈ ಕೆಳಕಂಡಂತೆ ಅವಲೋಕಿಸಿರುತ್ತಾರೆ (Observation) :

> 4. I have heard the learned Counsel for the petitioner, who argued that the procedure prescribed by Sections 128 and 129 of the Karnataka Land Revenue Act, 1964 was inapplicable to cases where mutations were entered on the basis of a decree of the Civil Court. It was urged that since the Revenue Officer has no option but to attest a mutation on the basis of a decree passed by the competent Civil Court, in accordance with the procedure prescribed by Section 129, it would be an exercise in futility to issue a notice or consider the objections of any party interested in filing the same. I am not impressed by this submission of the learned Counsel. There is nothing in Sections 128 or 129 of the Act to suggest that the procedure prescribed by the same has no application to cases in which the

mutation entries are claimed on the basis of a decree passed by a Civil Court. On the contrary, Section 128 specifically provides that any person acquiring any right in immovable property by any one of the modes specified in the said Section or otherwise shall report to the officer concerned either orally or in writing the acquisition of any such right. The term 'otherwise' appearing in Section 128 would bring within its fold a case where the person claims title not on the basis of one of the modes specifically mentioned in the said provision but on the basis of a decree passed in his favour by the Civil Court. Section 129 of the Act prescribes the procedure which the officer receiving the report under Section 128 has to follow does not either expressly or by necessary implication exclude the mutations claimed on the basis of a decree of a Civil Court from the rigors of the said procedure. Understandably so, because a decree may be passed with or without contest. It may be an exparte decree, or a decree based on the consent of the defendant, even when the defendant has no right to the property in question or has only a limited right. In all such cases adherence to the procedure prescribed by Section 129 would serve the purpose of finding out whether the interests of any third party in the property in question is being adversely affected. Determination of the rights of the third parties or the effect upon such rights by the decree passed by the Court would be impossible unless the provisions of Section 128 and 129 are read harmoniously to mean that a third party would be entitled to a notice before a mutation is entered in favour of the decreeholder. That apart, the very fact that a party to the proceedings or one who is likely to be affected can have no possible defence to the proposed action is no reason for the authority concerned to dispense with

a notice to such a party. The first ground of attack urged by the learned Counsel therefore fails.

ಮೇಲಿನ ತೀರ್ಪಿನಲ್ಲಿ ಹೇಳಿದ ಹಾಗೆ ಆ.ಸ.ನೌ–3 ಮತ್ತು 4 ರವರು ದೂರುದಾರರು ಅರ್ಜಿಯನ್ನು ಸಲ್ಲಿಸಿದ ನಂತರ ಅದಕ್ಕೆ ಆಕ್ಷೇಪಣೆ ಬಂದಿದ್ದು ಅದನ್ನು disputed entry ಎಂದು ನಮೂದಿಸಿ ವಿಚಾರಣೆಗಾಗಿ ತಹಶೀಲ್ದಾರ್ ರವರಿಗೆ ಕೊಟ್ಟುಕಳುಹಿಸಿರುತ್ತಾರೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ–3 ಮತ್ತು 4 ರವರು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಕಂಡು ಬರುತ್ತದೆ.

26.ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–2 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಮತ್ತು ಆ.ಸ.ನೌ–1, 3 ಮತ್ತು 4 ರವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಉತ್ತರಿಸಿರುತ್ತೇನೆ.

27.**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಆ.ಸ.ನೌಕರರಾದ **(2) ಶ್ರೀ. ಪಿ ನಟರಾಜ್,** ಕಂದಾಯ ನಿರೀಕ್ಷಕರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು **ಸಫಲವಾಗಿರುತ್ತದೆ** ಎಂದು ನಿರ್ಣಯಿಸಲಾಗಿದೆ.

ಆ.ಸ.ನೌಕರರಾದ (1) ಶ್ರೀಮತಿ. ಗ್ರಾಯತ್ರಿ, ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ; (3) ಶ್ರೀ. ಮುನಿ ರಂಗಸ್ವಾಮಯ್ಯ, ಗ್ರಾಮ ಲೆಕ್ಕಿಗರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (4) ಶ್ರೀ. ಗಿರೀಶ್, ಕಂದಾಯ ನಿರೀಕ್ಷರು, ತಹಶೀಲ್ದಾರ್‌ರವರ ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ–1, 2, 3 ಮತ್ತು 4 ರವರುಗಳು ನಿವೃತ್ತಿ ದಿನಾಂಕ: 31/07/2033, 31/07/2036, 30/06/2021 ಮತ್ತು 30/07/2035 ಅನುಕ್ರಮವಾಗಿ ಇರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

20/12

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. M.V Basavaraju S/o Veerappa, Retried Railway Employee, Nelamangala Taluk, Bengaluru Rural District. |
| 2 | **Documents marked on behalf of the Disciplinary Authority Ex.P-1 to Ex.P-14** | |
| | **Ex.P.1** | Agreement copy. |
| | **Ex.P.2** | Mutation Registrar. |
| | **Ex.P.3** | Judgment Copy in the Court of Senior Civil Judge & J.M.FC, Nelamangala. |
| | **Ex.P.4** | Order of Tahasildar, Nelamangala Taluk. |
| | **Ex.P.5** | Order of Assistant Commissioner Court, Doddaballapura Sub-Division, Bengaluru. |
| | **Ex.P.6** | Mutation Copy. |
| | **Ex.P.7** | RTC. |
| | **Ex.P.8** | Copy of Mutation Registrar. |
| | **Ex.P.9** | RTC. |
| | **Ex.P. 10** | Judgement copy in the Court of Prl. District Judge, Bangalore Rural District, Bangalore. |
| | **Ex.P. 11** | Application given to Tahasildar, Nelamangala Taluk. |
| | **Ex.P. 12** | Complaint given to this institution. |
| | **Ex.P. 13** | Form I. |
| | **Ex.P. 14** | Form II. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Girish G S/o B Gangaiah, FDA, O/o AC, Doddaballapura Sub-Division, Doddaballapura. |
| | **DW-2** | Sri. Munirangaswamaiah K.R S/o Late Rangaswamaiah, Rtd. Village Accountant, Bengaluru. |

| | | |
|---|---|---|
| | **DW-3** | Sri. G Nataraj S/o Late H. Gangadharaiah, Dy. Tahasildar, Tyamagondlu Hobli, Nelamangala Taluk, Bengaluru Rural District. |
| | **DW-4** | Smt. B.K Gayatri, Village Accountant, Kasaba Hobli, Nelamangala Taluk, Bengaluru Rural District. |
| 4 | **Documents marked on behalf of the DGOs through the complainant** | |
| | **Ex.D.1** | Dispute application given by Smt. Jayamma. |
| | **Ex.D.2** | Dispute application given by Sri. H. Srinivas. |
| | **Ex.D.3** | Form-21. |
| | **Ex.D.4** | Form-12. |
| | **Ex.D.5** | Mutation Registrar. |

Dated this the 20th December, 2021

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.